## ಪ್ರತಿ ಪುಟದಲ್ಲೂ ಹಾಸ್ಯ

ಏಪ್ರಿಲ್ ಒಂದರಂದು ಮನೆ- ಮನಗಳಿಗೆ ತಲುಪಿದ ಏ.8 ದಿನಾಂಕ ಹೊತ್ತಿದ್ದ ಸುಧಾ ಸಂಚಿಕೆಯ ಪ್ರತಿ ಪುಟಗಳಲ್ಲೂ ಹೊಮ್ಮಿದ ಹಾಸ್ಯಪ್ರಜ್ಞೆ ಇಷ್ಟವಾಯಿತು. ನಕ್ಕು ನಕ್ಕು ಹೊಟ್ಟೆ ಹುಣ್ಣಾಯಿತು! ಸಂಗ್ರಹಯೋಗ್ಯ ಸಂಚಿಕೆ. ನಟ- ನಟಿಯರಿಗೆ ಎಷ್ಟೊಂದು ಕಷ್ಟ- ನೋವು ಇದೆ ಎಂಬುದು ಹಾಸ್ಯ ಸಂಚಿಕೆಯಿಂದ ಪರಿಚಯವಾಯಿತು!

-ಗೀತಾ ಬುರ್ಲಿ, ಡಿ.ಎಸ್.ಪಂಕಜ ಸುಬ್ರಮಣ್ಯಂ,ಬೆಂಗಳೂರು/ ಕೆ.ಎಸ್.ರಘುನಾಥರಾವ್, ಫಲ್ಗುಣಿ/ ರಾಜಾಗ್ರಜಾ, ದೊಡ್ಡಬಳ್ಳಾಪುರ/ ಮಹಾವೀರ ಕಾಸಾರ, ಚನ್ನಗಿರಿ/ ವಿಭಾ ಮುರಳೀಧರ್, ತುಮಕೂರು/ ಸಂಜಯಕುಮಾರ, ಕೋಣನಕೇರಿ/ ಗಾಯತ್ರಿಸ್ವಾಮಿ, ಬಳ್ಳಾರಿ/ ಎಚ್.ಎನ್.ವಿಶ್ವನಾಥ್, ಪಿ.ಗೋವಿಂದರಾಜ್,ಶಿವಮೊಗ್ಗ/ ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ/ ಪ್ರಧ್ಯುಮ್ನ ಪಿ.ಬುರ್ಲಿ, ದಾವಣಗೆರೆ




## ಬೀಳು!

ಬದುಕಿನಲ್ಲಿ ಬೀಳುವುದೂ
ಬೇಕು; ನಿದರ್ಶನಕ್ಕೆ
ಬಿದ್ದು ಬಿದ್ದು ನಗುವುದು!
'ಸುಧಾ' ಹಾಸ್ಯ ವಿಶೇಷಾಂಕ ಬೀಳಿಸಿತು!

-ಸಿಪಿಕೆ, ಮೈಸೂರು

## ಯುವಕರಿಗೆ ಬಣ್ಣದಿಂದ ಸ್ಫೂರ್ತಿ

ಏ.1ರ ಸುಧಾ ಸಂಚಿಕೆಯಲ್ಲಿ ಪ್ರಕಟವಾದ 'ಜಲವರ್ಣದ ಮಾಂತ್ರಿಕ' ಸಯ್ಯದ್ ಆಸಿಫ್ ಅಲಿ ವ್ಯಕ್ತಿ ಪರಿಚಯ (ದಿನೇಶ್ ಹೊಳ್ಳ) ಯುವಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ.

-ಸೌಜನ್ಯ ಬಿ., ಶಿವಮೊಗ್ಗ

## ವರ್ಷಕ್ಕೆರಡು ಬರಲಿ!

ಮೂರ್ಖರ ಸಂಚಿಕೆ... ಕ್ಷಮಿಸಿ. ಮೂರ್ಖರ ದಿನಾಚರಣೆಯ ವಿಶೇಷ ಸಂಚಿಕೆ ಏ.1ರಂದೇ ಕೈ ಸೇರಿ ಆ ದಿನವನ್ನು ಸಾರ್ಥಕಗೊಳಿಸಿತು. ಅನೇಕ ಮಾಮೂಲಿ ಶೀರ್ಷಿಕೆಗಳನ್ನು ಕೈ ಬಿಟ್ಟು ನಗೆ ಲೇಖನಗಳನ್ನೇ ತುಂಬಿದ್ದುದು ವಿಶೇಷವೆನಿಸಿತು. ಇಂತಹ ಸಂಚಿಕೆಗಳು ಹೆಚ್ಚಿನ ಪುಟಗಳೊಂದಿಗೆ ಬಂದರೆ ಅಥವಾ ವರ್ಷಕ್ಕೆರಡು ಸಲವಾದರೂ ಬಂದರೆ ಕಷ್ಟದ ದಿನಗಳಲ್ಲೂ ನಗಲು ಸಾಧ್ಯವಾಗಬಹುದು!

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಬ್ಲಂಡರ್ ಫೂಲ್

'ವಂಡರ್ ಪುಟ' ಎಷ್ಟು ಕುತೂಹಲ ಕೆರಳಿಸಿತೆಂದರೆ, ನಾನು ಏಪ್ರಿಲ್ ಫೂಲ್ ಆದೆನೆಂಬ ಅರಿವಾದುದು 'ಬ್ಲಂಡರ್ ಪುಟ' ನೋಡಿದಾಗಲೆ!

-ಸರಸ್ವತಿ ಶಂಕರ್, ಬೆಂಗಳೂರು

## ಓದುಗರು ಫೂಲ್!

ಪ್ರತಿ ಬರಹಗಳೂ ನಗೆಗಡಲಿನಲ್ಲಿ ತೇಲಿಸಿದವು. ಆದರೆ ಓದುಗರ ಬರಹಗಳಿಗೆ ಕೊಕ್ ನೀಡಿದ್ದು ಮಾತ್ರ ಓದುಗರನ್ನು ಏಪ್ರಿಲ್ ಫೂಲ್ ಮಾಡಿದಂತೆನಿಸಿತು.

ರಾಜಶೇಖರ ಗೌಡ, ಕೊಟ್ಟೂರು

## ಅತಿಯಾಯಿತು!

ಇಡೀ ಸಂಚಿಕೆಯನ್ನೇ ಹಾಸ್ಯಕ್ಕೆ ಮೀಸಲಿರಿಸಿದ್ದು ಮಾತ್ರ ಸರಿಯಲ್ಲ. ಶೇ.40ರಷ್ಟು ಹಾಸ್ಯ ಇದ್ದರೆ ಸಾಕಾಗಿತ್ತು. ಯಾಕೆಂದರೆ ಅತಿಯಾದರೆ ಅಮೃತವೂ ವಿಷವಾಗಿಬಿಡಬಹುದು!

-ವೈ.ಎಂ.ಚಂದ್ರಶೇಖರ, ಸಿದ್ದಾಪುರ

## ವೈವಿಧ್ಯಮಯ ಸಂಚಿಕೆ

'ಸುಧಾ' ಯುಗಾದಿ ವಿಶೇಷಾಂಕ 2010 ಅದ್ಭುತವಾಗಿದೆ. ವ್ಯಂಗ್ಯಚಿತ್ರಗಳು ನಗು ತರಿಸುತ್ತವೆ. ವಿಶೇಷ ಲೇಖನ, ಕಥೆಗಳು ಸ್ವಾರಸ್ಯವಾಗಿವೆ. ಸಮಯ ಸಿಕ್ಕಾಗೆಲ್ಲ ವಿಶೇಷ ಸಂಚಿಕೆಯನ್ನು ಮೊರೆಹೋಗಿ ತಲ್ಲೀನನಾಗುತ್ತೇನೆ. ಪ್ರತಿಯೊಂದು ಪುಟಗಳು (ಜಾಹಿರಾತು ಹೊರತುಪಡಿಸಿ) ವೈವಿಧ್ಯಮಯವಾಗಿದೆ. 'ಬೋರ್'ಗೆ ಅವಕಾಶವಿಲ್ಲ, ಸಂಗ್ರಹಯೋಗ್ಯ ಸಂಚಿಕೆ.

-ಎಚ್.ಎನ್ ವಿಶ್ವನಾಥ್, ಶಿವಮೊಗ್ಗ

ಸಂತಸ ತಂದ ವಿಶೇಷಾಂಕ: 'ಸುಧಾ' ವಿಶೇಷಾಂಕ ನೋಡಿ ಸಂತೋಷವಾಯ್ತು. ಚೆನ್ನಾಗಿ ಮೂಡಿ ಬಂದಿದೆ.

-ಸೋಮ ಎಂ. ಘಟ್ಟ, ರಿಪ್ಪನ್ ಪೇಟೆ

### ಕಥೆ ಉತ್ತಮ, ಪ್ರಬಂಧ ಸಾಧಾರಣ

ಕಥೆಗಳು ಚೆನ್ನಾಗಿದ್ದವು. ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿರುವ ದುರಂತಮಯ ಚಿತ್ರವನ್ನು ಕಲಿಗಣನಾಥ ಗುಡದೂರರ ತೂತುಬೊಟ್ಟು ಕಥೆ ಕಟ್ಟಿಕೊಟ್ಟಿತು. ಪ್ರಬಂಧಗಳು ಸಾಧಾರಣ. ವಿ.ಮನೋಹರರ ತಾರೆಯರ ತಾರಾಫಲ ಸ್ವಲ್ಪಮಟ್ಟಿಗೆ ಹೊರತು ಪಡಿಸಿದರೆ, ಪ್ರಶಸ್ತಿ ಪಡೆದ ಲಲಿತ ಪ್ರಬಂಧಗಳು ಸಹ ಚೆನ್ನಾಗಿರಲಿಲ್ಲ.

-ರಘು ಕುಲಕರ್ಣಿ, ಕುಷ್ಟಗಿ




### ಆಕರ್ಷಕ ಬರಹಗಳು

ಯುಗಾದಿ ವಿಶೇಷಾಂಕದ ಎಲ್ಲ ಬರಹಗಳೂ ಸರಳವಾಗಿ, ಆಕರ್ಷಕವಾಗಿದ್ದವು. ವಸುಂಧರಾರ ಸ್ಟೋನ್ ಹೆಂಜ್ ಲೇಖನ ಮಾತ್ರ ತುಸು ಭಾರವಾಯಿತು. ಸಿನಿಮಾ, ಟಿವಿ ಕುರಿತ ಲೇಖನಗಳು ಆ ಕ್ಷೇತ್ರದ ಒಳನೋಟ ಕೊಟ್ಟವು.

-ವಿ.ಬಸವರಾಜ, ಗಿರಿಜ, ಪರಮೇಶ್ವರಪ್ಪ, ದಾವಣಗೆರೆ

Himalaya HERBALS

ಸೌಂದರ್ಯ ಗುಟ್ಟು:
ಕತ್ತರಿಸಿದ ನಿಂಬೆ ಹಣ್ಣನ್ನು ನಿಮ್ಮ ತ್ವಚೆಗೆ ಹಚ್ಚಿಕೊಳ್ಳುವುದರಿಂದ ತ್ವಚೆಯು ಬಿಸಿಲಿನಿಂದ ಕಪ್ಪಾಗುವುದನ್ನು ತಪ್ಪಿಸಬಹುದು.

ಪ್ರಕೃತಿ ಚಿಕಿತ್ಸೆ
ಸ್ಪೈಕ್ಡ್ ಜಿಂಜರ್ ಲಿಲ್ಲಿ ನಿಮ್ಮ ತ್ವಚೆಯನ್ನು ಯುವಿ ಕಿರಣಗಳಿಂದ ಸಂರಕ್ಷಿಸುತ್ತದೆ. ಅಲೋವೆರಾ ತೇವಾಂಶವನ್ನು ನೀಡುತ್ತದೆ. ಕ್ರ್ಯಾಬ್ ಆ್ಯಪಲ್ ಅವಧಿಗೆ ಮುನ್ನವೇ ತ್ವಚೆಯ ಮುಪ್ಪುತನಕ್ಕೊಳಗಾಗುವುದನ್ನು ತಡೆಗಟ್ಟುತ್ತದೆ.

ಈ ಮೇಲೆ ತಿಳಿಸಿರುವ ಎಲ್ಲಾ ನೈಸರ್ಗಿಕ ಸಾರಗಳನ್ನು ಹಿಮಾಲಯಾ ಪ್ರೊಟೆಕ್ಟೀವ್ ಸನ್‌ಸ್ಕ್ರೀನ್ ಲೋಷನ್ ಒಳಗೊಂಡಿರುತ್ತದೆ.

